### ಜೀವದ ಗೆಳತಿ ಸುಧಾಳಿಗೆ,




ಏನೇ ಸುಧಾ! ಏನ್ ಮಾಡಾಕತ್ತೀ ನೀ? ಇಡೀ ರಾಜ್ಯಾದಾಗ ನೀನೊಬ್ಬಾಕೀನ ಮೆರೀಬೇಕು ಅಂತ ಮಾಡಿಯೇನ? ವಾರಕ್ಕೊಮ್ಮೆ ಅದೇನು ಅಂದಾ ಚಂದಾ ಮಾಡ್ಕೊಂಡು ಬಂದು ನಮ್ಮನ್ನೆಲ್ಲ ರಂಜಿಸ್ತೀಯಲ್ಲಾ, ಇಷ್ಟೆಲ್ಲ ವಿಷಯ ನಿನಗ ಹ್ಯಾಂಗ ಸಿಗ್ತಾವು ಅಂತೀನಿ.

ಪ್ರತಿ ಗುರುವಾರ ಮುಂಜಾನೆ ಎದ್ದ ಕೂಡ್ಲೆ ನೀ ಬರೂ ದಾರೀನ ನಾ ಕಾಯ್ತಿರ್ತೀನಿ. ನೀ ಬರೂದು ಸ್ವಲ್ಪ ತಡಾ ಆದ್ರೂ ಆ ಪೇಪರ್ ಕೊಡು ಹುಡುಗನ ಮ್ಯಾಗ ಸಿಟ್ ಮಾಡ್ಕೊಂತೀನಿ; ರೇಗಾಡ್ತೀನಿ. ಯಾಕಂದ್ರ ನೀ ನನಗ ಅಷ್ಟಂದ್ರ ಅಷ್ಟ ಹುಚ್ಚು ಹಿಡ್ಸಿ.

ಒಳಗಿನ ಪುಟಾನ ತಿರುವಿ ಹಾಕಿದ್ಹಾಂಗ ನಿನ್ನ ಹೊಟ್ಯಾಗಿಂದ ಜ್ಞಾನದ ಹೂರಣಾನ ತೆರೆದುಕೊಳ್ಳೈತಿ. ವಿಚಾರದ ಲಹರಿಯಿಂದ ಪ್ರಾರಂಭವಾಗುವ ನಿನ್ನ ಜೈತ್ರಯಾತ್ರಾ ಮುತ್ತಿನಂಥಾ ಮಾತಿನ ಮೂಲಕ ಮುಂದವರಿತೈತಿ. ಹಂಗ ಸಣ್ಣಗ ನಗುಸೂದ್ರಾಗ ನನ್ನ ಮಿತ್ರ ರಾಮ್ ಕಚಗುಳಿ ಇಡೂ ಉತ್ರಾ ಕೊಟ್ಟಿರ್ತಾರ. ನಡಬರಕ ನಮ್ಮೊಡನೆ ನೀ ಆಡೂ ಮಾತು, ಆರೋಗ್ಯದ ಟಿಪ್ಸ್, ಹಿಂದಿನ ವಾರದ ಜ್ಞಾನ ಸಮುದ್ರದ ಮಥನ, ಅಗ್ರ ಲೇಖನ, ಫ್ಯಾಷನ್ ಬಗ್ಗೆ, ಪ್ರವಾಸದ ಬಗ್ಗೆ, ವಿಶೇಷ ಮಾಹಿತಿ ಬಗ್ಗೆ ನೀ ವಹಿಸೋ ಕಾಳಜೀನ ಮತ್ತ ಯಾರೂ ವಹಿಸಂಗಿಲ್ಲ ಅಂತ ಕಾಣಸ್ತೈತಿ.

ಈಗಿನ ಹುಡುಗೂರಿಗೆ ಬೇಕಾಗೂ ತಂತ್ರಜ್ಞಾನ, ಹೆಣ್ಮಕ್ಕಳಿಗೆ ಬೇಕಾಗೂ ಕತಿ, ಕವನ, ಕಾದಂಬರಿ, ಮಕ್ಕಳ ಮನಸ್ಸ ಗೆಲ್ಲಾಕ ಕಾಮಿಕ್ಸ್, ಅವರ ಮನಸ್ಸ ಅರಳ್ಸಾಕ ಎಳೆಯರ ಅಂಗಳ, ದೂರದರ್ಶನ ಸುದ್ದಿ, ಸಿನಿಮಾ ಸುದ್ದಿ, ಒಂದ ಎರಡಾ ನಿನ್ನ ಹೊಟ್ಯಾಗ ನೀ ಇಟ್ಕೊಂಡಿರೋದು. ಮನ್ಯಾಗ ಹೆಂಡ್ತಿ ನನ್ನ ಹೊಟ್ಟೆ ಹಸಿವಿನ ಹ್ಯಾಂಗೋ ಹಿಂಗಿಸ್ತಾಳ. ಆದ್ರ ನೀನು ವಾರಕ್ಕೊಮ್ಮೆ ಬಂದು ನನ್ನ ನೆತ್ತಿ ಹಸಿವು ತುಂಬಸ್ತೀಯಲ್ಲ, ಅದಕ್ಕ ನೀ ನನಗ ಆಪ್ತ ಗೆಳತಿ ಆಗಿರೋದು. ಅಂದ್ಹಾಂಗ ಆಗೀಗ ನಾನೂ ನಿನ್ನ ಹೊಟ್ಯಾಗ ನನ್ನವೂ ಲೇಖನಾ ಬರದೀನಿ, ಮುಂದ ಬರೀತೀನಿ ಅನ್ನೂ ವಿಷಯಾನ ಭಾಳಂದ್ರ ಭಾಳ ಖುಷಿ ಕೊಡ್ತೈತಿ.

ನೀ ಹಿಂಗ ಇನ್ನಷ್ಟ, ಮತ್ತಷ್ಟ ಚೆಂದ ಆಕ್ಕೊಂತ ಎಲ್ಲಾರ ಮನಸ್ಸ ಗೆಲ್ಲಕೊಂತ ಇಡೀ ನಾಡಿನ್ಯಾಗ ಮೆರೀತಿರು. ಅದನ್ನ ನೋಡಿ ನಾ ಸಂತೋಷಪಡ್ತೀನಿ. ಮತ್ತ ಒಂದು ಕೊನೆ ಮಾತು.ಹದಿನಾಲ್ಕು ಲಕ್ಷಕ್ಕೂ ಹೆಚ್ ಮಂದಿ ನಿನ್ನ ಮೆಚ್ಗೊಂಡಾರ ಅಂದ ಮ್ಯಾಗ ನಾ ನಿನ್ನ ಮೆಚ್ಗೊಂಡಿರೂದ್ರಾಗ ಏನ್ ಹೆಚ್ಗಾರ್ಕಿ ಐತಿ ಅಂತೀನಿ. ಯಾರ್ದೂ ದೃಷ್ಟಿ ನಿನ್ನ ಮ್ಯಾಗ ಬೀಳಲಾರದ್ಹಂಗ ನೀ ಹಿಂಗ ನಗನಗ್ತಾ ನಿನ್ನ ಸಂಖ್ಯಾ ಹೆಚ್ಚ ಮಾಡ್ಕೊಂತ ಹೋಗು. ಮತ್ತ ವಾರಾ ತಪ್ಪಲಾರ್ದ ಬಂದು ನನ್ನ ನೆತ್ತಿ ತಂಪ ಮಾಡು. ಮುಖದ ಮ್ಯಾಗ ಒಂದ ಮಂದಹಾಸ ಮಿನುಗ್ಸು. ಮತ್ತ ನಿನ್ನ ಇಷ್ಟ ಚೆಂದ ಮಾಡಿ ಹೊರಗ ಬಿಡ್ತಾರಲ್ಲ, ಅವ್ರಿಗೂನು ಒಂದು ಥ್ಯಾಂಕ್ಸ್ ಹೇಳಿಬಿಡು. ಕಡೇ ಮಾತು, ಆಲ್ ದಿ ಬೆಸ್ಟ್ ಸುಧಾ!

ಇಂತಿ ನಿನ್ನವ,

ಅರುಣ ಬಿ. ಕುಲಕರ್ಣಿ, ಗದಗ



### ಪ್ರಣಯಾಭಿಲಾಷೆಯ ಕೆಂಡಸಂಪಿಗೆ

ಚೈತ್ರಿಕಾ ನಾಯ್ಕ ಹರ್ಗಿ ಲೇಖನ ಮಾಹಿತಿಪೂರ್ಣವಾಗಿದೆ. ಈಗಿನ ಯುವಜನಾಂಗಕ್ಕೆ ಡೇಟಿಂಗ್ ಆ್ಯಪ್ ಆಸಕ್ತಿದಾಯಕವಾಗಿರುವುದಕ್ಕೆ ಮುಖ್ಯ ಕಾರಣ ಜನರೇಶನ್ ಗ್ಯಾಪ್. ಹಿರಿಯರ ಮತ್ತು ಕಿರಿಯರ ನಡುವಿನ ಆಲೋಚನಾ ಕ್ರಮ, ಜೀವನ ಕ್ರಮ, ಉದ್ಯೋಗ, ರೀತಿ ನೀತಿಗಳಲ್ಲಿ ಬಹಳ ಅಂತರವಿದೆ. ಯುವಕರ ಭಾವನೆಗಳನ್ನು ಹಿರಿಯರು, ಹಿರಿಯರ ಭಾವನೆಗಳನ್ನು ಯುವಕರು ಅರ್ಥ ಮಾಡಿಕೊಳ್ಳಲು ಅಸಮರ್ಥರಾಗಿದ್ದಾರೆ. ಆದ್ದರಿಂದ ಯುವಜನಾಂಗ ತಾತ್ಕಾಲಿಕ ಸುಖವೇ ಪರಮಸುಖ ಎಂದು ಭಾವಿಸಿದ್ದಾರೆ.

—ಬಿ.ಶೋಭಾ ಅರಸ, ತೆಕ್ಕಟ್ಟೆ

'ಪ್ರಣಯಾಭಿಲಾಷೆಯ ಕೆಂಪಸಂಪಿಗೆ' ಪ್ರೀತಿ, ಪ್ರೇಮ, ಪ್ರಣಯಗಳಿಗ ಆಂತರ್ಯವನ್ನು ಬಿಡುಬೀಸಾಗಿ ಬಹಿರಂಗಪರಿಸುವ ಉತ್ತಮ ಸಂವೇದನೆಯ ಲೇಖನ. ವೈಜ್ಞಾನಿಕ ಜಗತ್ತಿನ ಕೊಡುಗೆ, ಸಂಚಾರಿ ದೂರವಾಣಿ, ಹದಿವಯಸ್ಸಿನ ಅಮಲು, ಹುಡುಕಾಟ–ತಡಕಾಟ, ಗಂಡು–ಹೆಣ್ಣಿನ ಸಹಜ ಆಕರ್ಷಣೆ, ಅದಕ್ಕೆ ಒದಗಿಬರುವ ಆ್ಯಪ್‌ಗಳು ಎಲ್ಲವನ್ನೂ ಲೇಖನದಲ್ಲಿ ಸಮಗ್ರವಾಗಿ ವಿವರಿಸಲಾಗಿದೆ.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

### ಕಠ್ಮಂಡು ದರ್ಶನ



ಜೂನ್ 13ರ ಸಂಚಿಕೆಯಲ್ಲಿ ನಾ. ಕಾರಂತ ಪೆರಾಜೆ ಬರೆದಿರುವ 'ಕಾಡುವ ಕಠ್ಮಂಡು' ಲೇಖನ ಇಷ್ಟವಾಯ್ತು. ಸಹಜ ಸಂಸ್ಕೃತಿಯ ನೇಪಾಳದ ತಾಣವನ್ನು ಪರಿಚಯಿಸಿದ ಲೇಖಕರಿಗೆ ಅಭಿನಂದನೆಗಳು.

—ಸೋಮಶೇಖರ್ ಎಚ್.

### ತಪ್ಪು ದಾರಿಯ ಚಂದಿರ

ಜೂನ್ 13 ರ ಸಂಚಿಕೆಯಲ್ಲಿ ಪ್ರಕಟವಾದ ಜಿ.ಪ್ರವೀಣ್ ಕುಮಾರ್ ಅವರ ಕಥೆ 'ಬಣ್ಣದ ಚಂದಿರ' ಚೆನ್ನಾಗಿತ್ತು. ತಪ್ಪು ಮಾಡಿದ ಮೂವರಲ್ಲಿ ಇಬ್ಬರು ಪ್ರಾಣ ಕಳೆದುಕೊಂಡರು. ಆದರೆ ಶಿವು ಕೂಡ ಸತ್ತಿದ್ದರೆ ಕೆಎಎಸ್‌ಗೆ ಗೌರವ ಹೆಚ್ಚಾಗುತ್ತಿತ್ತು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು.

ಜೂನ್ 20ರ ಸಂಚಿಕೆಯಲ್ಲಿ ಸುಧಾ 14,72,000ಕ್ಕೂ ಅಧಿಕ ಓದುಗರನ್ನು ಹೊಂದಿರುವ ಸುದ್ದಿ ತಿಳಿದು ಸಂತೋಷವಾಯ್ತು. 'ಇಂಟರ್ವಲ್' ಲೇಖನ ಚೆನ್ನಾಗಿತ್ತು. ಆರು ತಿಂಗಳ ಚಿತ್ರರಂಗದ ಆಗುಹೋಗುಗಳ ಸಮಗ್ರ ಚಿತ್ರಣ ಸಿಕ್ಕಿತು. ಹಾಗೆಯೇ ಮುಂದಿನ ಆರು ತಿಂಗಳ ಮಹತ್ವದ ಸಿನಿಮಾಗಳ ಕುರಿತೂ ಮಾಹಿತಿ ದೊರೆತವು. ಬಹಳಷ್ಟು ಚಿತ್ರಗಳು ಮುಗ್ಗರಿಸಿವೆ ಎಂದು ತಿಳಿಯಿತು. ಯಾಕೆ ಹೀಗೆ? ನಿರ್ದೇಶಕನ ಕಲ್ಪನೆಯೇ ಕೆಟ್ಟದಾಗಿದೆಯೇ? ಚಿತ್ರರಸಿಕರೇ ಕಮ್ಮಿಯಾಗಿದ್ದಾರೆಯೇ?

—ಸೋಮಣ್ಣ ಎಸ್.ಡಿ.

'ಇಂಟರ್ವಲ್' ಲೇಖನ ಓದಿದೆ. ಈ ವರ್ಷದ ಆರಂಭದಲ್ಲಿ ಬಂದಿದ್ದ 'ಬೀರ್‌ಬಲ್' ಸಿನಿಮಾ ಚೆನ್ನಾಗಿತ್ತು. ಅದರ ಬಗ್ಗೆ ನೀವು ಬರೆದಿಲ್ಲ.

—ರಮೇಶ್ ರಾಮ್

### ಮಕ್ಕಳ ಆರೋಗ್ಯದ ಕಾಳಜಿಯ ಲೇಖನ

ಜೂನ್ 20ರ ಸಂಚಿಕೆಯಲ್ಲಿ ಪ್ರಕಟವಾದ ಎಂ.ಡಿ. ಸೂರ್ಯಕಾಂತ ಹಾಗೂ ಉಮಾ ವೇಣೂರು ಅವರು ಮಕ್ಕಳ ಆರೋಗ್ಯದ ಕುರಿತು ಬರೆದ ಲೇಖನಗಳು ಶ್ಲಾಘನೆಗೆ ಅರ್ಹವಾಗಿವೆ. ಈ ಹಿಂದೆ ಮಕ್ಕಳ ಸಹಜಜೀವನ ವೈಖರಿಯ ಕಾರಣಕ್ಕೆ ದೇಹ ಅತೀ ಹೆಚ್ಚು ಪ್ರತಿರಕ್ಷಕ ಗುಣ ಹೊಂದಿರುತ್ತಿತ್ತು. ಇತ್ತೀಚೆಗೆ ಚಿಕ್ಕಪುಟ್ಟ ಸಮಸ್ಯೆಗಳಿಗೆ ಮನೆಮದ್ದಿನ ಬದಲಿಗೆ ವೈದ್ಯರ ಬಳಿ ಕರೆದೊಯ್ಯುವ, ಆಧುನಿಕ ಚಿಕಿತ್ಸಾ ಪದ್ಧತಿಗೆ ಮಾರುಹೋಗಿರುವುದು ಹಲವು ಸಮಸ್ಯೆಗಳ ಉಲ್ಬಣಕ್ಕೆ ಕಾರಣವಾಗಿವೆ.

—ನಳಿನಿ ಆರ್. ಮಾಗಲ್, ಸಕಲೇಶಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in